ಎಂ ವಿ ಸಿ ನಂ. 255/2018
ಪಿ ಡಬ್ಲ್ಯೂ: 1
ದಿನಾಂಕ 16-02-2023 ರಂದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು: 1 ಮತ್ತು 2ನೇ ಎದುರುದಾರರ ಪರ: ಶ್ರೀ ಸಿಜಿಆರ್ ವಕೀಲರಿಂದ:</u>

ಅಪಘಾತವಾದ ದಿನ ನಿಡಘಟ್ಟದಿಂದ ದಾಸರಹಟ್ಟಿಗೆ ಹೋಗುತ್ತಿದ್ದೇನು. ಅಪಘಾತವಾದ ಸ್ಥಳದಲ್ಲಿ 4 ರಸ್ತೆಗಳು ಕೂಡುತ್ತವೆ ಎಂದರೆ ನಿಜ. ಅಪಘಾತವಾದ ದಿನ ನಾನು ಚಾಲನೆ ಮಾಡುತ್ತಿದ್ದ ವಾಹನ ನನ್ನ ತಮ್ಮನಿಗೆ ಸೇರಿದ್ದಾಗಿರುತ್ತದೆ. ಸದರಿ ವಾಹನಕ್ಕೆ ವಿಮೆ ಇತ್ತೋ ಇಲವೋ ನನಗೆ ಗೊತ್ತಿಲ್ಲ. ಸದರಿ ವಾಹನಕ್ಕೆ ವಿಮೆ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ನನಗೆ ವಾಹನ ಚಾಲನೆ ಮಾಡಲು ಚಾಲನಾ ಪರವಾನಿಗಿ ಇಲ್ಲ ಎಂದರೆ ಸರಿಯಲ್ಲ. ನನ್ನ ಚಾಲನಾ ಪರವಾನಿಗಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಅತೀವೇಗವಾಗಿ ಚಾಲನೆ ಮಾಡಿಕೊಂಡು ಬಂದು ನಾನೇ 1ನೇ ಎದುರುದಾರರ ವಾಹನಕ್ಕೆ ಡಿಕ್ಕಿ ಪಡಿಸಿ ಅಪಘಾತ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಏಕಾಏಕಿ ಅತೀವೇಗವಾಗಿ ಬಂದ ಕಾರಣ ಅಪಘಾತವಾಗಿದೆ ಎಂದರೆ ಸರಿಯಲ್ಲ.

1ನೇ ಎದುರುದಾರರ ತಪ್ಪಿನಿಂದ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ. ಅಪಘಾತವು ನನ್ನ ತಪ್ಪಿನಿಂದ ಆಗಿರುವುದರಿಂದ 1 ಮತ್ತು 2 ನೇ ಎದುರುದಾರರು ನನಗೆ ಪರಿಹಾರ ಕೊಡಲು ಬಾಧ್ಯರಲ್ಲ ಎಂದರೆ ಸರಿಯಲ್ಲ.

<u>ಪಾಟೀ ಸವಾಲು: 3ನೇ ಎದುರುದಾರರ ಪರ: ಶ್ರೀ ಸಿಓವೈ ವಕೀಲರಿಂದ:</u>

ಅಪಘಾತವು ನಾನು ರಸ್ತೆಯ ಎಡ ಬದಿಯಲ್ಲಿ ವಾಹನವನ್ನು ನಿಲ್ಲಿಸಿಕೊಂಡು ನಿಂತಿದ್ದಾಗ ಆಗಿರುತ್ತದೆ. ಅಪಘಾತವಾದ ದಿನ ನಿಡಘಟ್ಟದ ಕಡೆಯಿಂದ ಬರುತ್ತಿದ್ದೇನು. ಟಾಟಾಏಸ್ ವಾಹನವು ಸಖರಾಯಪಟ್ಟಣದ

ಕಡೆಯಿಂದ ನನ್ನ ಎದುರುಗಡೆ ಬರುತ್ತಿತ್ತು. ಅಪಘಾತದ ಬಗ್ಗೆ ಪೋಲೀಸರಿಗೆ ನಾಗೇಶ್ ಎಂಬುವವರು ದೂರನ್ನು ನೀಡಿರುತ್ತಾರೆ. ಸದರಿ ದೂರಿನಲ್ಲಿ ನಾನು ರಸ್ತೆಯ ಎಡಬದಿಯಲ್ಲಿ ನಿಂತಿದ್ದೆ ಟಾಟಾ ಏಸ್ ವಾಹನ ಬಂದು ಅಪಘಾತಪಡಿಸಿತು ಎಂದು ಹೇಳಲಾಗಿದೆ. ಅಪಘಾತವಾದ ನಂತರ ನಾನು ಕಡೂರಿನ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ನಂತರ ಮುಂದಿನ ಚಿಕಿತ್ಸೆಗಾಗಿ ಶಿವಮೊಗ್ಗದ ಮ್ಯಾಕ್ಸ ಆಸ್ಪತ್ರೆಗೆ ಹೋಗಿರುತ್ತೇನೆ.

ದೂರನ್ನು ನೀಡಿರುವ ನಾಗೇಶ್ ನನ್ನ ಬಾವನಾಗಬೇಕು. ಅಪಘಾತವಾದ ದಿನ ನಾನು ಮತ್ತು ನನ್ನ ಬಾವ ಇಬ್ಬರು ಹೋಗುತ್ತಿದ್ದೇವು. ಅಪಘಾತವಾದ ದಿನ ನಾನೇ ಬೈಕನ್ನು ಚಾಲನೆ ಮಾಡುತ್ತಿದ್ದು ನನ್ನ ಬಾವ ಹಿಂಬದಿ ಸವಾರರಾಗಿದ್ದರು. ಟಾಟಾಏಸ್ ವಾಹನವು ನನ್ನ ಬೈಕಿಗೆ ಮುಖಾಮುಖಿಯಾಗಿ ಬಂದು ಡಿಕ್ಕಿ ಪಡಿಸಿರುತ್ತದೆ. ಅಪಘಾತವಾಗುವ ಮೊದಲು ನಾನು ಆಸ್ಪತ್ರೆಗೆ ಹೋಗಿರುವುದಿಲ್ಲ. ನಿಪಿ-5 ರ ದಾಖಲೆಯಲ್ಲಿ ಅಪಘಾತವು ದಿನಾಂಕ 05/12/2017 ರಂದು ಆಗಿದೆ ಎಂದು ನಮೂದಾಗಿದೆ ಮತ್ತು ವೈದ್ಯರು ನನಗೆ ಮೊದಲು ಚಿಕಿತ್ಸೆ ನೀಡಿದ್ದು ದಿನಾಂಕ 05/12/2017 ರಂದು 7.10 ಕ್ಕೆ ಎಂದು ನಮೂದಾಗಿದೆ ಎಂದರೆ ನನಗೆ ಗೊತ್ತಿಲ್ಲ.

ಅಪಘಾತದಲ್ಲಿ ನನ್ನ ತಲೆ, ಕೈ ಮತ್ತು ಹಲ್ಲಿಗೆ ಪೆಟ್ಟಾಗಿರುತ್ತದೆ. ನಾನು ಆಸ್ಪತ್ರೆಯಲ್ಲಿ ಒಂದು ವಾರ ಒಳರೋಗಿಯಾಗಿ ದಾಖಲಾಗಿದ್ದೇನು. ನಾನು ದೋಷರೋಪಣಾ ಪತ್ರವನ್ನು ಹೊರುತಪಡಿಸಿ ಸಾಕ್ಷಿದಾರರ ಹೇಳಿಕೆ ಮತ್ತು ಸ್ಥಳ ಪಂಚನಾಮೆಯನ್ನು ಹಾಜರುಪಡಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ನನಗೆ ಶಿವಮೊಗ್ಗದ ಆಸ್ಪತ್ರೆಯಲ್ಲಿ ಶಸ್ತ್ರ ಚಿಕಿತ್ಸೆಯಾಗಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ಎಡಭುಜಕ್ಕೆ ರಾಡನ್ನು ಅಳವಡಿಸಲಾಗಿದೆ ಎಂದು ನುಡಿದಿರುತ್ತಾರೆ. 1 ನೇ ಎದುರುದಾರರು ನನಗೆ ಪರಿಚಯ ಇರುವುದಿಲ್ಲ. ಅಪಘಾತವಾದ ದಿನ ಟಾಟಾಏಸ್ ವಾಹನವನ್ನು 1 ನೇ ಎದುರುದಾರರು ಚಾಲನೆ ಮಾಡುತ್ತಿದ್ದರು ಎಂಬ ವಿಚಾರ ನನಗೆ ಅಪಘಾತವಾದ ಎರಡು ದಿನಗಳ ನಂತರ ಗೊತ್ತಾಗಿರುತ್ತದೆ.

ದಿನಾಂಕ 15/12/2017 ರಂದು ಟಾಟಾ ಏಸ್ ವಾಹನದಿಂದ ನನಗೆ ಯಾವುದೇ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ. ಅಪಘಾತವಾದ ದಿನ 1 ನೇ ಎದುರುದಾರರು ಟಾಟಾಏಸ್ ವಾಹನವನ್ನು ಚಾಲನೆ ಮಾಡುತ್ತಿರಲಿಲ್ಲ ಬೇರೆ ಯಾರೋ ಚಾಲನೆ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ನನಗೆ ಚಾಲನಾ ಪರವಾನಿಗಿ ಇಲ್ಲದ ಕಾರಣ ಅಪಘಾತವು ನನ್ನ ತಪ್ಪಿನಿಂದ ಆಗಿದ್ದರು ಇಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಯಾವುದೇ ಅಪಘಾತವಾಗಿಲ್ಲದ ಕಾರಣ ನಿಪಿ-5 ರ ದಾಖಲೆಯಲ್ಲಿ ದಿನಾಂಕ 05/12/2017 ಎಂದು ನಮೂದಾಗಿದೆ ಎಂದರೆ ಸರಿಯಲ್ಲ. ಅಪಘಾತದಿಂದ ನನಗೆ ಯಾವುದೇ ಗಾಯಗಳು ಆಗಿಲ್ಲ ಮತ್ತು ಶಸ್ತ್ರಚಿಕಿತ್ಸೆಯಾಗಿಲ್ಲ ಎಂದರೆ ಸರಿಯಲ್ಲ.

ನಾನು ವ್ಯವಸಾಯ ಮತ್ತು ಚಾಲಕ ವೃತ್ತಿಯನ್ನು ಮಾಡುತ್ತೇನೆ. ನನಗೆ ವ್ಯವಸಾಯದಿಂದ ಮಾಸಿಕ 20 ಸಾವಿರ ರೂ ಆದಾಯ ಇರಲಿಲ್ಲ ಎಂದರೆ ಸರಿಯಲ್ಲ. ನಮ್ಮ ಕುಟುಂಬಕ್ಕೆ 3 ಎಕರೆ ತೆಂಗಿನ ತೋಟ ಇದೆ. ತೋಟದಿಂದ ಮೊದಲು ಬರುತ್ತಿದ್ದಂತೆ ಈಗಲೂ ಆದಾಯ ಬರುತ್ತಿದೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನಾನು ಚಾಲಕನಾಗಿ ಕೆಲಸ ಮಾಡುತ್ತಿದ್ದೇನೆ ಎಂದು ನಮುದಾಗಿಲ್ಲ ಎಂದರೆ ಸರಿಯಲ್ಲ. ಪೋಲಿಸರ ಜತೆ ಷರೀಕ್ಕಾಗಿ 1 ನೇ ಎದುರುದಾರರ ವಿರುದ್ದ ಸುಳ್ಳು ಕೇಸನ್ನು ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. ಆದ್ದರಿಂದ 3 ನೇ ಎದುರುದಾರರು ನನಗೆ ಪರಿಹಾರ ಕೊಡಲು ಬಾದ್ಯರಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂ., ಕಡೂರು.